# ಸ್ವರ್ಣಸೇತು

## ವಾರ್ಷಿಕ ಸಂಚಿಕೆ – ೨೦೦೬

## ಉತ್ತರ ಕ್ಯಾಲಿಫೋರ್ನಿಯ ಕನ್ನಡ ಕೂಟ


ಪ್ರಧಾನ ಸಂಪಾದಕರು : ರಾಮಪ್ರಸಾದ್. ಕೆ.ವಿ.

ಸಂಪಾದಕರು : ಅಪರ್ಣ ಶಂಕರ್
ಅಶೋಕ ಹಂದಿಗೋಳ
ಗಣೇಶ ಶರ್ಮ ತ್ಯಾಗಲಿ
ಪ್ರಭು ಮೂರ್ತಿ

# ‘Swarnasethu’

***Annual magazine of Kannada Koota of Northern California, USA for the year 2006.***

**Chief Editor**: Ramaprasad K.V.
Milpitas, California, USA

**Publisher**: Naren Kunhody
President, Kannada Koota of Northern California
4074 Guildford Pl
San Jose, California, USA

**Coverpage:** Cultural Roots
by
Sreevathsa Duglapura
Sunnyvale, CA, USA

**Layout:** Swarnasethu editorial committee

**Copyright**: © 2006 Individual Authors
All the registered trademarks used in this magazine belong to the respective owners.

**Printed by**: Alpha Printing & Media Services, Inc.
1409 N 10th St
San Jose, CA 95112
(408) 885 8210, Fax (408) 885 8212
rp@alpha-printing.com
www.alpha-printing.com

**Notes:**

1. Complimentary copies of the magazine are issued to the current members of KKNC and invited authors.

2. The Member Directory in this magazine is intended for the exclusive personal use of KKNC members only. The use of this directory for any other purpose without prior permission from KKNC is prohibited.

# US AUTO BODY & PAINT

THE FENDER BENDER SPECIALIST

*One Stop Shop For All Your Fender Bender needs*

**OTHER SERVICES WE PROVIDE**

- Brake Service
- Air Conditioning
- Electrical
- Drive Axels & CV
- Engine Cooling / Radiator Services
- Add Sealant/lubricant to the system
- A/C Diagnostic and Repair
- "Tune-up". We do standard tune-up. However we use state-of-the-art diagnostic equipment to diagnose most problems
- Towing: We carry the facility of towing service exclusivly for our clients
- Engines: We have technicians who do a professional inspection of the engine and performance diagnostics. We do all internal engine repairs from head gaskets and valve jobs to complete engine replacements.
- Eletricals: We work on all kinds of electrical related jobs like alrernator, starter, battery and battery cables





**US Auto Body & Paint**

**461 Harbor Blvd,**
**Belmont, CA 94002**
**Tel. (650) 592-1405**
**Fax: (650) 592-1508**
**Cell (Amar): (650) 400-5770**
**Cell (Dorothy): (650) 291 8004**
**Email: info@usautobodypaint.com**

**Hours of Operation:**

**Monday – Friday: 9 AM to 6 PM**

**Saturday: 9 AM to 3 PM**

# INDIA
## CASH & CARRY







- The largest Supermarket in SILICON VALLEY is here to serve you with top brand names, quality products, full of freshness and good taste
- Wide variety of Indian, Pakistani, Bangladeshi, Fijian and Sri Lankan Items
- Wide range of Chapaties, Poories, Paratha and all types of Fresh Naans
- Ready to eat and Frozen entrees for quick & easy meals
- Mouth watering Fresh Samosa's, Kachori and Botata Wadas
- Shamiana Sweets and Fresh Pan are also available here
- We carry Pooja items and a variety of Kitchen Hardware and Utensils

**Top brand names**
**Quality products**
**Full of freshness**
**Good taste**

Brooke Bond A1

Maggi

HATHI BRAND TRADE MARK

SUN BRAND




- Caram Boards, Cricket sets and other sporting goods are also available
- Plenty of Parking, Wide Aisles for you and your family to shop together
- Friendly SERVICE making every trip a worthwhile experience

**1032 E El Camino Real, Sunnyvale, CA 94087**
**(408) 735-7383**
**7 Days a Week: 9 A.M - 10 P.M**

# ವಿಷಯಾನುಕ್ರಮಣಿ


ಸಂಪಾದಕರ ಸಂದೇಶ .......................................... 1
ಅಧ್ಯಕ್ಷರ ನಲ್ನುಡಿ: ನರೇನ್ ಕುಇಸ್ಗೋಡಿ .......................................... 3
ಅಧ್ಯಕ್ಷರ ಸಂದೇಶ: ರಮೇಶ್ ಜಾವಗಲ್ .......................................... 5

ಕಥಾಸಂಗಮ ..........................................

- ಸ್ವರ್ಣಸೇತು ಯುಗಾದಿ ಕಥಾಸ್ಪರ್ಧೆ ಫಲಿತಾಂಶ .......................................... 20
- ಕವಲು ದಾರಿ : ಮಂಗಳಾ ಕುಮಾರ್ .......................................... 21
- ದಕ್ಷಿಣಾಪಥೇಶ್ವರ : ರವೀಂದ್ರ ವಿಶ್ವನಾಥ್ .......................................... 26
- ಕಾರ್ಮೋಡದಂಚಿನ ಬದುಕು : ಜ್ಯೋತಿ ಶೇಖರ್ .......................................... 35
- ಉಡುಗೊರೆ : ಪೂರ್ಣಿಮಾ ರಾಮಪ್ರಸಾದ್ .......................................... 42
- ಗೃಹ ಪ್ರವೇಶ : ವಿಶ್ವನಾಥ್ ಹುಲಿಕಲ್ .......................................... 48
- ವಿಭ್ರಾಂತಿ : ಅಪರ್ಣ ಶಂಕರ್ .......................................... 56
- ಕನ್ನಡಿ : ಡಾ. ಮೈ ಶ್ರೀ ನಟರಾಜ .......................................... 59
- ಆಕಸ್ಮಿಕ : ಸತ್ಯವತಿ ರಾವ್ .......................................... 64
- ಸಿಕ್ಕರೆ ಸಾಕು : ಸುಧಿ ಬೆಂಗಳೂರು .......................................... 68
- ಹಕ್ಕಿ ಗೂಡಿಗೆ ಸೇರಿತು : ವಲ್ಲೀಶ ಶಾಸ್ತ್ರಿ .......................................... 73
- ಜೀವನ ಪಯಣದಲ್ಲೊಂದು ನಿಲ್ದಾಣ : ವಿಶ್ವನಾಥ ಪತ್ತಾರ್ .......................................... 81
- ವಿಜಯನಗರ ಸಾಮ್ರಾಜ್ಯದ ಕನಸುಗಾರ ಕುಮಾರರಾಮ : ಸಂಧ್ಯಾ ಗಾಯತ್ರಿ .......................................... 89
- ಪ್ರೇಮಾಂತರಂಗ : ಡಾ. ಮೀನಾ ಸುಬ್ಬರಾವ್ .......................................... 96

ವರದಿ ಸರದಿ ..........................................

- ಸ್ವರ್ಣಸೇತು – ೨೦೦೫ ಬಿಡುಗಡೆ : ಜ್ಯೋತಿ ಶೇಖರ್ .......................................... 104
- ಸಂಭ್ರಮದ someಕ್ರಾಂತಿ! : ಗಣೇಶ್ ಶರ್ಮ ತ್ಯಾಗಲಿ .......................................... 106
- ಹರುಷದ ವರುಷಾರಂಭ : ಅಪರ್ಣ ಶಂಕರ್ .......................................... 108
- ಆಟವ್ವೋ, ನೋಟವ್ವೋ, ಊಟವ್ವೋ ... : ಅಶೋಕ ಹಂದಿಗೋಳ .......................................... 110
- ಕನ್ನಡಕಲಿಗಳ ದಿನ : ಪ್ರಭು ಮೂರ್ತಿ .......................................... 112
- ಐ. ಸಿ. ಸಿ.ಯಲ್ಲಿ ಕರ್ನಾಟಕ ದಿನ : ಅಶೋಕ ಹಂದಿಗೋಳ .......................................... 114
- ಧರ್ಮಾಧಿಕಾರಿಗಳ ಭೇಟಿ : ರಾಮಪ್ರಸಾದ್ ಕೆ.ವಿ. .......................................... 116
- ಮಾಲ್‌ನಲ್ಲೊಂದು ಮಾತುಕತೆ : ರಾಮಪ್ರಸಾದ್ ಕೆ.ವಿ. .......................................... 117
- ಹಚ್ಚೇವು ಕನ್ನಡದ ದೀಪ : ಅಶೋಕ ಹಂದಿಗೋಳ .......................................... 120

ಲೇಖನ – ಕವನ ..........................................

- ಪಂಡಿತ ಬಸವರಾಜ ರಾಜಗುರು : ಸುರೇಶ ಯಕ್ಕುಂಡಿ .......................................... 125
- ಮಿಸ್ಟರ್ ಮಿಸ್ಸೆಸ್ ಚಕ್ರಪಾಣಿ : ಕಪ್ಪಿನಿಯ .......................................... 129
- ಮಲೆನಾಡ ಭೂರಮೆ : ನೃಪತುಂಗ .......................................... 130
- ಪ್ರಶಿಕ್ಷಣದ ಪವಾಡ : ಡಾ. ಶಿಕಾರಿಪುರ ಕೃಷ್ಣಮೂರ್ತಿ<br>ಸಿ. ಎಸ್. ರಾಘವೇಂದ್ರ ಸ್ವಾಮಿ .......................................... 131
- ಅನಾಥ : ಸಂಕೇತ್ ಗುರುದತ್ತ .......................................... 135
- ನನ್ನ ಪೂಜ್ಯ ತಂದೆ: ಪು ತಿ ನ. : ಅಲಮೇಲು ಅಯ್ಯಂಗಾರ್ .......................................... 136
- ಸಂಸ್ಕೃತ ಸಾಹಿತ್ಯದಲ್ಲಿ ಹಾಸ್ಯ : ವಿದ್ವಾನ್ ರಾಮಚಂದ್ರ ಶರ್ಮ ತ್ಯಾಗಲಿ .......................................... 139
- ವಚನ ಚಳುವಳಿ – ಪುಸ್ತಕ ಪರಿಚಯ : ಅಶ್ವಿನಿ ಸುರಪುರ .......................................... 141
- ಹದಿನಾರು ಸಾವಿರದವರ ನಾಡಿನಲ್ಲಿ : ಮಾನಸ ವೆಂಕಟಸುಬ್ಬಯ್ಯ .......................................... 143
- ಸೌಂದರ್ಯ ಲಹರಿ : ಭಾರತಿ ರಾವ್ .......................................... 144
- ಕನ್ನಡದ homonymಗಳು : ಪ್ರಭು ಮುರ್ತಿ .......................................... 146
- ದಾರಿತಪ್ಪದ ಮಾತುಕತೆ : ಕಿರಣ್ ಸೂರ್ಯನಾರಾಯಣ .......................................... 148
- ಎರಡು ಕವಿತೆಗಳು : ನೇ ನಂ ಶಿವರಾಮಯ್ಯ .......................................... 150

ಭಗವದ್ಗೀತೆಯ ಮಹತ್ವ : ಎ. ವಿ. ರಂಗನಾಥ ರಾವ್ .......... 151
ಹಳೆಯ ಹಾಳೆಯ ಮೇಲೊಂದು ಕವನ : ಸಂಕೇತ್ ಗುರುದತ್ತ .......... 153
ಬೆಳಗೊಳದ ಬಾಹುಬಲಿ : ಅಶೋಕ ಹಂದಿಗೋಳ .......... 154
ಬೆಳ್ಗೊಮ್ಮಟ : ಡಾ. ಮೈ ಶ್ರೀ ನಟರಾಜ .......... 155
ತಾವರೆಕೆರೆ ಜಾತ್ರೆಯಲ್ಲಿ... : ಶ್ರೀವತ್ಸ ದುಗ್ಗಾಪುರ .......... 156
ಕೋಪ : ಮಂಜುಳಾ ವಿಶ್ವನಾಥ್ .......... 157
ಪ್ರಕೃತಿ ವಿಸ್ಮಯ : ಅಲಮೇಲು ಅಯ್ಯಂಗಾರ್ .......... 159
ಅಳಿವು – ಉಳಿವು : ಸುಪ್ತ ದೀಪ್ತಿ .......... 160
ಹಿಂದೂಸ್ತಾನೀ ಕವಿತೆಗಳು : ಡಾ. ರವಿ ಗೋಪಾಲರಾವ್ .......... 161
ಕಂದನಿಗೆ : ಸುಧಿ ಬೆಂಗಳೂರು .......... 163
ಇಂಗ್ಲೀಷ್ – ಕನ್ನಡ ಅನುವಾದದ ಪ್ರಸ್ತುತತೆ ಮತ್ತು ಮಹತ್ವ : ವಿಶ್ವನಾಥ್ ಹುಲಿಕಲ್ .......... 164
ಸ್ಫೂರ್ತಿ ಸೆಲೆ : ಸುಪ್ತ ದೀಪ್ತಿ .......... 166
'ಕನ್ನಡ ಕಲಿ' ಅನುಭವ : ಸಂಧ್ಯಾ ರವೀಂದ್ರನಾಥ್ .......... 167
ಸಂತೆ : ಸುಕುಮಾರ್ ಎಸ್. ರಘುರಾಮ್ .......... 170
ಬಾಲ್ಯದ ಸವಿ ನೆನಪುಗಳು : ಸವಿತಾ ಚಂದ್ರಶೇಖರ್ .......... 171
ಸಿಟ್ಟು : ಶೀನಾಥ್ ಭಲ್ಲೆ .......... 173
ಚಾಣಕ್ಯ ನೀತಿ : ವಿ|| ರಾಮಚಂದ್ರ ಶರ್ಮ ತ್ಯಾಗಲಿ .......... 175
ಒಂದು ಕಿತ್ತಳೆ ಹಣ್ಣಿನ ಪ್ರಸಂಗ : ಹಂ. ಕ. ಕೃಷ್ಣಪ್ರಿಯ .......... 176
ಯುಗಾದಿ : ಚಿತ್ರಾ ಮೋಹನ್ .......... 177
ಸ್ತ್ರೀ ಸಮಾನತೆ ಬೇಕಿತ್ತೇ ? : ಜ್ಯೋತಿ ಶೇಖರ್ .......... 178
ಅವಳಿಲ್ಲ .......... 181

ಸಂಭಾಷಣೆ ..........

ಚಿತ್ರನಟ ರಮೇಶ್ ಭಟ್ ಅವರೊಡನೆ ಒಂದು ಮಾತುಕತೆ .......... 184
'ಕನ್ನಡ ಮರೆತರೆ ತಾಯಿ ಮರೆತ ಹಾಗೆ' – ಎನ್. ಎಸ್. ಎಲ್. ಭಟ್ಟರು .......... 188

ಕಿರಿಯರ ವಿಭಾಗ ..........

Kabini Lodge : Abhijit Ramaprasad .......... 194
A Diamond In My Eye : Shruti Indiresan .......... 195
Amazing Brother : Krishna Madhusudan .......... 196
Basavanna : Puja Gubbi .......... 199
Earth : Apoorva Handigol .......... 200
Common Origins : Swetha Madhusudan .......... 201
A Cry for Peace : Sushma Murthy .......... 205
My Feelings : Abhishek Handigol .......... 206
Bharat Ratna Sir M. Visvesvaraya : Kshithij Shrinath .......... 207
Contributions of Kannadigas to Indian Classical Arts : Priyanka Prasad .......... 209
Three Poems : Meghana Bheemarao .......... 211
Boy Scout : Rohit Upadhya .......... 212
Kannada Kali Class : Neeti Indiresan .......... 214

Member Information

Financial Statement for the year 2005 .......... 180
KKNC Member Directory - 2006 .......... 216
KKNC Life members .......... 226
ADVERTISERS' INDEX .......... 229

# ಸಂಪಾದಕರ ಸಂದೇಶ

ನಲ್ಮೆಯ ಮಿತ್ರರೇ,

ಸ್ವರ್ಣಸೇತು–೨೦೦೬ ಸುವರ್ಣ ಕರ್ನಾಟಕ ಸಂಭ್ರಮದ ನಡುವೆ ನಿಮ್ಮ ಕೈ ಸೇರಿದೆ. ಪ್ರತಿ ವರ್ಷದಂತೆ ಹಲವು ಹೊಸತನಗಳೊಂದಿಗೆ ಹೊರಬಂದಿರುವ ಸ್ವರ್ಣಸೇತುವಿನ ಈ ಸಂಚಿಕೆ ನಿಮ್ಮ ಮನಸ್ಸಿಗೆ ಮುದವನ್ನು ತರುವುದೆಂಬುದು ನಮ್ಮ ಆಶಯ.

ಬರೆಯುವ ಹುಮ್ಮಸ್ಸು ಇರುವ ನಮ್ಮ ಕೂಟದ ಸದಸ್ಯರಿಗೆ ತಮ್ಮ ಸೃಜನಶೀಲತೆಯನ್ನು ತೋರಿಸಲು ಅವಕಾಶ ತರುವುದು ಸ್ವರ್ಣಸೇತುವಿನ ಉದ್ದೇಶಗಳಲ್ಲೊಂದು. ತವರಿನಿಂದ ದೂರದಲ್ಲಿದ್ದರೂ ನಮ್ಮ ಮನದಾಳದಲ್ಲಿ ಕನ್ನಡದಲ್ಲಿ ಓದಿ, ಬರೆಯುವ ಹಂಬಲ ಇರುವುದು ಸಹಜ. ವರ್ಷದಿಂದ ವರ್ಷಕ್ಕೆ, ನಮ್ಮ ಸದಸ್ಯರ ಬರೆಯುವ ಉತ್ಸಾಹ ಹೆಚ್ಚುತ್ತಲಿರುವುದು ಬಹಳ ಸಂತಸಪಡಬೇಕಾದ ಸಂಗತಿ. ಈ ರೀತಿ ಬರೆಯುವ ಪ್ರೀತಿ ಹೆಚ್ಚುತ್ತಾ ಎಲ್ಲಾ ಕನ್ನಡಿಗರಿಗೂ ಮೇಲ್ಪಂಕ್ತಿಯಾಗಲಿ ಎಂದು ಹಾರೈಸುತ್ತೇವೆ. ಈ ಬಾರಿ ವೈವಿಧ್ಯಮಯವಾದ ಬರಹಗಳನ್ನು ನೀವು ನಮಗೆ ಕಳಿಸಿದ್ದೀರಿ. ಸ್ಥಳಾಭಾವದಿಂದ ಕೆಲವು ಬರಹಗಳನ್ನು ಪ್ರಕಟಿಸಲಾಗದ್ದಕ್ಕೆ ನಿಮ್ಮ ಕ್ಷಮೆ ಕೋರುತ್ತೇವೆ.

ಈ ಸಂಚಿಕೆಯಲ್ಲಿ ನಿಮ್ಮ ಓದಿಗೆ ಹಲವು ಕಥೆಗಳು, ಲೇಖನಗಳು, ಕವನಗಳು, ಸಂದರ್ಶನಗಳು ಇವೆ. ಹಿರಿಯರ ಜೊತೆಗೆ, ಕನ್ನಡಕೂಟದ ಕಿರಿಯರೂ ಇಂಗ್ಲಿಷ್‌ನಲ್ಲಿ ಬರೆದ ಲೇಖನ, ಕವನಗಳೂ ಇವೆ. ಜೊತೆಗೆ ೨೦೦೬ನೇ ವರ್ಷ ಸಾಗಿದ ರೀತಿಯನ್ನು ನೆನಪಿಸುವ ವರ್ಣಚಿತ್ರಗಳೂ, ಕನ್ನಡಕೂಟ ನಡೆಸಿದ ಕಾರ್ಯಕ್ರಮಗಳ ವರದಿಗಳೂ, ಕಳೆದ ವರ್ಷದ ಪಕ್ಷಿನೋಟವನ್ನು ನಿಮಗೆ ನೀಡುತ್ತವೆ.

ಈ ವರ್ಷ ವಿನೂತನವಾಗಿ ಸ್ವರ್ಣಸೇತು ಸಮಿತಿ ನಮ್ಮ ಕಥೆಗಾರರನ್ನು ಉತ್ತೇಜಿಸಲು ಕಥಾಸ್ಪರ್ಧೆಯನ್ನು ಏರ್ಪಡಿಸಿತ್ತು. ನಮ್ಮ ಬರಹಗಾರರಿಂದ ಒಳ್ಳೆಯ ಪ್ರತಿಕ್ರಿಯೆಯೂ ಬಂತು. ಹಲವು ಕಥೆಗಳನ್ನು ಬರೆದಿರುವ ನಮ್ಮವರೇ ಆದ ಸಂಧ್ಯಾ ರವೀಂದ್ರನಾಥ್, thatskannada.com ತಾಣದಲ್ಲಿ ಅಂಕಣಕಾರ್ತಿಯಾಗಿರುವ ತ್ರಿವೇಣಿ ಶ್ರೀನಿವಾಸರಾವ್ ಮತ್ತು ಕಥೆಗಾರರಾಗಿ ಹೆಸರಾಗಿರುವ ಡಾ. ಗುರುಪ್ರಸಾದ್ ಕಾಗಿನೆಲೆ ಈ ಸ್ಪರ್ಧೆಗೆ ತೀರ್ಪುಗಾರರಾಗಿದ್ದರು. ಅವರಿಗೆ ನಮ್ಮ ಸಮಿತಿಯ ವತಿಯಿಂದ ಧನ್ಯವಾದಗಳನ್ನರ್ಪಿಸಲು ಬಯಸುತ್ತೇನೆ.

ಈ ಸಂಚಿಕೆಯಲ್ಲಿ ಪ್ರಕಟಿಸಿರುವ ಎರಡು ಸಂದರ್ಶನಗಳಿಗೆ, ನಾವು ವಿನಂತಿಸಿಕೊಂಡ ತಕ್ಷಣ "ಅದಕ್ಕೇನಂತೆ...ಬನ್ನಿ ಖಂಡಿತ ಮಾತಾಡೋಣ" ಎಂದು ಆತ್ಮೀಯತೆಯಿಂದ ತಮ್ಮ ಅಮೂಲ್ಯವಾದ ಸಮಯವನ್ನು ನೀಡಿದ್ದಕ್ಕಾಗಿ ಪ್ರಖ್ಯಾತ ಸಾಹಿತಿ ಡಾ. ಎನ್. ಎಸ್. ಲಕ್ಷ್ಮಿನಾರಾಯಣ ಭಟ್ಟರಿಗೂ ಮತ್ತು ಜನಪ್ರಿಯ ಚಿತ್ರನಟ ರಮೇಶ್ ಭಟ್ ಅವರಿಗೂ ನಮ್ಮ ಕೃತಜ್ಞತೆಗಳು.

ಇಲ್ಲಿ ನೀವು ವಾಚಿಸುವ ಬರಹಗಳನ್ನು ಬಹುತೇಕವಾಗಿ ನಮ್ಮ ಉತ್ತರ ಕ್ಯಾಲಿಫ಼ೋರ್ನಿಯಾದ ಕನ್ನಡಿಗರು ಬರೆದಿದ್ದರಾದರೂ ಅಮೇರಿಕೆಯ ಇತರ ಭಾಗಗಳಿಂದ ಅಷ್ಟೇ ಅಲ್ಲದೆ, ನಮ್ಮ ದೂರದ ಕನ್ನಡನಾಡಿನಿಂದಲೂ ಹಲವಾರು ಲೇಖಕರು ತಮ್ಮ ಕೊಡುಗೆಯಿಂದ ಈ ಸಂಚಿಕೆಯ ಮೌಲ್ಯವನ್ನು ಹೆಚ್ಚಿಸಿದ್ದಕ್ಕಾಗಿ ಅವರಿಗೆಲ್ಲ ನಮ್ಮ ಧನ್ಯವಾದಗಳು.

ಇದಲ್ಲದೆ ಈ ಸಂಚಿಕೆ ಸರ್ವಾಂಗ ಸುಂದರವಾಗಿ ಹೊರಬರಲು ನೆರವು ನೀಡಿದ ಹಲವರನ್ನು ನಾವು ಇಲ್ಲಿ ನೆನೆಯಲು ಬಯಸುತ್ತೇವೆ. ನಮ್ಮ ಸಂಸ್ಕೃತಿಯ ಬೇರುಗಳನ್ನು ಬಿಂಬಿಸುವ ಸುಂದರವಾದ ಮುಖಪುಟವನ್ನು ರಚಿಸಿದ ಶ್ರೀವತ್ಸ ದುಗ್ಗಾಪುರ, ಬಣ್ಣದ ಪುಟಗಳ ಸಂಯೋಜನೆಯಲ್ಲಿ ಸಹಕರಿಸಿದ ನರೇನ್ ಕುಞ್ಞೋಡಿ, ಕಥೆಗಳಿಗೆ ಬಹಳ ಸುಂದರ ರೇಖಾಚಿತ್ರಗಳನ್ನು ಬರೆದಿರುವ ಸೌಜನ್ಯ ಕೇಣಿ ಮತ್ತು ಕೂಟದ ಕಿರಿಯ ಸದಸ್ಯೆ ಸುಚರಿತ ಎಲಿಮೇಲಿ, ಸಂದರ್ಶನಗಳನ್ನು ಬರಹರೂಪಕ್ಕಿಳಿಸಲು ಸಹಾಯಹಸ್ತ ನೀಡಿದ ಲಕ್ಷ್ಮೀ ಶ್ರೀನಾಥ್, ಸಂಧ್ಯಾ ಸುಬ್ಬರಾಮು, ಸಂಧ್ಯಾ ಗಾಯತ್ರಿ, ಮೀನಾ ಸುಬ್ಬರಾವ್, ಕಿರಣ್ ಸೂರ್ಯನಾರಾಯಣ ಮತ್ತು ಪ್ರಶಾಂತ್ ಕೃಷ್ಣಮೂರ್ತಿ ಹಾಗೂ ತಿದ್ದುಪಡಿಗೆ ಸಹಾಯ ನೀಡಿದ ಕುಸುಮಾ ಅರಕಲಗೂಡು, ಸ್ವರ್ಣಸೇತು ಸಮಿತಿಯ ಸದಸ್ಯರಾಗಿ ಕೆಲವು ತಿಂಗಳು ಕಾರ್ಯ ನಿರ್ವಹಿಸಿದ ಸುಮಿತ್ರಾ ಸೊಂಡೆಕೆರೆ, ಇವರೆಲ್ಲರಿಗೆ ನಮ್ಮ ಕೃತಜ್ಞತೆಗಳು. ಸಾಹಿತ್ಯಗೋಷ್ಠಿಯ ವಿಶ್ವನಾಥ್ ಹುಲಿಕಲ್

ಅವರು ಒಂದು ತಿಂಗಳ ಕಾರ್ಯಕ್ರಮವನ್ನು ಸ್ವರ್ಣಸೇತು ಬರಹಗಳ ವಾಚನಕ್ಕಾಗಿಯೇ ಮೀಸಲಾಗಿಟ್ಟಿದ್ದರು. ಅವರಿಗೂ ನಾವು ಕೃತಜ್ಞರು. ಸಂಚಿಕೆಯು ಆರ್ಥಿಕವಾಗಿ ಸ್ವಾವಲಂಬಿಯಾಗಲು ಶ್ರಮಿಸಿದ ಮಾರುಕಟ್ಟೆ ಮತ್ತು ಪ್ರಚಾರ ಸಮಿತಿಯ ಸದಸ್ಯರು ಹಾಗೂ ತಮ್ಮ ಜಾಹೀರಾತುಗಳ ಮೂಲಕ ಧನಸಹಾಯ ಮಾಡಿದವರಿಗೆಲ್ಲ ಕೃತಜ್ಞತೆಗಳು. ಈ ಸಂಚಿಕೆ ಅತ್ಯುತ್ತಮ ಗುಣಮಟ್ಟದ್ದಾಗಿರಬೇಕೆಂಬ ನಮ್ಮ ಪ್ರಯತ್ನಕ್ಕೆ ಅಗತ್ಯವಾದ ಪ್ರೋತ್ಸಾಹವನ್ನು ನೀಡಿ, ಸಮಯವನ್ನು ತ್ಯಾಗ ಮಾಡಿದ ನಮ್ಮ ಕುಟುಂಬದ ಎಲ್ಲ ಸದಸ್ಯರಿಗೂ ನಾವು ಆಭಾರಿಯಾಗಿದ್ದೇವೆ. ಈ ಸಂಚಿಕೆಯನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಮುದ್ರಕರಾದ ಆಲ್ಫಾ ಪ್ರಿಂಟಿಂಗ್ ಪ್ರೆಸ್‌ಗೂ ನಮ್ಮ ಧನ್ಯವಾದಗಳು ಸಲ್ಲುತ್ತವೆ.

ಈ ಸಂಚಿಕೆಯನ್ನು ಗಣಕದಲ್ಲಿ ಮೂಡಿಸಲು ಶೇಷಾದ್ರಿವಾಸು ಅವರ ‘ಬರಹ’ ಉಚಿತ ತಂತ್ರಾಂಶವನ್ನು ಉಪಯೋಗಿಸಿದ್ದೇವೆ. ಇಲ್ಲಿ ಪ್ರಕಟವಾಗಿರುವ ಎಲ್ಲಾ ಲೇಖನಗಳ ಸ್ವಾಮ್ಯವು ಆಯಾ ಲೇಖಕರಿಗೆ ಸೇರುತ್ತದೆ.

ಈ ಸ್ವರ್ಣಸೇತುವಿನಲ್ಲಿ ಹೃದಯಸ್ಪರ್ಶಿ ಕವನಗಳಿವೆ, ಮನಮುಟ್ಟುವಂತಹ ಕಥೆಗಳಿವೆ, ಮನಃಪ್ರಚೋದಕ ಮಾರ್ಗದರ್ಶಕ ಲೇಖನಗಳಿವೆ. ನಗುವಿದೆ. ನೀತಿಯಿದೆ. ನವ ಸಾಮಾಜಿಕ ಜೀವನದ ಚಿತ್ರಗಳಿವೆ. ಇಂತಹ ವೈವಿಧ್ಯಮಯ ಸಂಕಲನದಲ್ಲಿ ಒಂದಿಷ್ಟು ವೈಜ್ಞಾನಿಕ ಲೇಖನಗಳೂ ಇದ್ದರೆ ಇದು ನಿಜವಾಗಿಯೂ ಸಂಪೂರ್ಣವಾಗುತ್ತಿತ್ತೇನೋ. ಹಾಗೇ, ನಮ್ಮ ಕಿರಿಯರ ಕಲ್ಪನಾ-ಲೋಕದ ಹಲವು ಚೇತೋಹಾರಿ ತುಣುಕುಗಳೂ ಈ ಸಂಚಿಕೆಯನ್ನು ಸಮೃದ್ಧಮಾಡಿವೆ. ‘ಕನ್ನಡ ಕಲಿ’ಯಂತಹ ಉತ್ತಮ ಯೋಜನೆಗಳನ್ನು ಹಾಕಿಕೊಂಡ ಕನ್ನಡಕೂಟದ ಪ್ರಯತ್ನದ ಫಲವಾಗಿ ನಮ್ಮ ಈ ಯುವಪೀಳಿಗೆ ಕನ್ನಡದಲ್ಲಿಯೂ ಕೃಷಿ ನಡೆಸಲಿ; ನಮ್ಮ ಮುಂಬರುವ ಸಂಚಿಕೆಗಳನ್ನು ಇನ್ನಷ್ಟು ಸುಂದರವಾಗಿಸಲಿ ಎಂದು ಆಶಿಸುತ್ತಾ,

ಧನ್ಯವಾದಗಳೊಂದಿಗೆ,

**ಸ್ವರ್ಣಸೇತು ಸಂಪಾದಕ ಸಮಿತಿ**



**ರಾಮಪ್ರಸಾದ್.ಕೆ.ವಿ**

*(ಪ್ರಧಾನ ಸಂಪಾದಕರು)*



**ಗಣೇಶ್ ಶರ್ಮ ತ್ಯಾಗಲಿ**

*(ಸಹಸಂಪಾದಕರು)*



**ಅಪರ್ಣ ಶಂಕರ್**

*(ಸಹಸಂಪಾದಕರು)*



**ಪ್ರಭು ಮೂರ್ತಿ**

*(ಸಹಸಂಪಾದಕರು)*



**ಅಶೋಕ ಹಂದಿಗೋಳ**

*(ಸಹಸಂಪಾದಕರು)*



# ಅಧ್ಯಕ್ಷರ ನಲ್ನುಡಿ

ಕನ್ನಡ ಬಾಂಧವರಿಗೆ ನಮಸ್ಕಾರ.

ಅಮೇರಿಕ ಸಂಯುಕ್ತ ಸಂಸ್ಥಾನದ ಬಹು ದೊಡ್ಡ ಕನ್ನಡ ಕೂಟವಾದ ಉತ್ತರ ಕ್ಯಾಲಿಫ಼ೋರ್ನಿಯಾ ಕನ್ನಡ ಕೂಟದ ಅಧ್ಯಕ್ಷನಾಗಿ, ಕನ್ನಡಕ್ಕೆ ಹಾಗೂ ಕನ್ನಡಿಗರಿಗೆ ನನ್ನ ಅಳಿಲು ಸೇವೆ ಸಲ್ಲಿಸುವ ಸದವಕಾಶ ದೊರೆತದ್ದು ನನ್ನ ಅದೃಷ್ಟವೆಂದು ಭಾವಿಸುತ್ತೇನೆ. ನಿಮಗೆ ಈಗಾಗಲೇ ತಿಳಿದಿರುವಂತೆ ಈ ವರ್ಷದ ಏಪ್ರಿಲ್‌ನಲ್ಲಿ ಅಧ್ಯಕ್ಷರಾದ ಶ್ರೀ ರಮೇಶ್ ಜಾವಗಲ್ ಕಾರಣಾಂತರಗಳಿಂದ ಬೆಂಗಳೂರಿಗೆ ಮರಳಬೇಕೆಂದು ನಿರ್ಧರಿಸಿದಾಗ, ಉಪಾಧ್ಯಕ್ಷನಾಗಿದ್ದ ನಾನು ಕನ್ನಡ ಕೂಟದ ಸಂವಿಧಾನದ ಪ್ರಕಾರ ಒಮ್ಮತದಿಂದ ಈ ಸಂಸ್ಥೆಯ ಅಧ್ಯಕ್ಷನಾದೆ. ಈ ಜವಾಬ್ದಾರಿಯನ್ನು ಉತ್ತಮವಾಗಿ ನಿರ್ವಹಿಸಲು ನನಗೆ ಕೂಟದ ಸದಸ್ಯರೆಲ್ಲರೂ ಬೆಂಬಲ ನೀಡಿದ್ದೀರಿ, ಅದಕ್ಕಾಗಿ ಅನಂತ ಧನ್ಯವಾದಗಳು. ಕಾರ್ಯಕಾರೀ ಸಮಿತಿ ಸದಸ್ಯರ ಸಹಕಾರದೊಂದಿಗೆ ಕನ್ನಡ ಕೂಟದ 'ಬೋರ್ಡ್ ಆಫ಼್ ಟ್ರಸ್ಟೀಸ್' ಅಧ್ಯಕ್ಷರೂ ಮತ್ತು ಸದಸ್ಯರೂ ನೀಡಿದ ಉತ್ತೇಜನವನ್ನೂ ನಾನು ಸ್ಮರಿಸಲು ಇಚ್ಛಿಸುತ್ತೇನೆ.

ಕನ್ನಡ ಕೂಟದ ಅಧ್ಯಕ್ಷನ ಸ್ಥಾನಕ್ಕೇರಿದಾಗ ಪಾರಂಪರಿಕವಾಗಿ ನಡೆಸಿಕೊಂಡು ಬರುತ್ತಿರುವ ಕಾರ್ಯಕ್ರಮಗಳ ಜೊತೆಗೆ ಇನ್ನೂ ಹೆಚ್ಚಿನ ವೈವಿಧ್ಯಮಯವಾದ ಕಾರ್ಯಕ್ರಮಗಳನ್ನು ನಿಮ್ಮ ಮುಂದಿಡಬೇಕೆನ್ನುವುದು ನನ್ನ ಬಯಕೆಯಾಗಿತ್ತು. ಸಂಕ್ರಾಂತಿ ಮತ್ತು ಯುಗಾದಿ ಕಾರ್ಯಕ್ರಮಗಳು ರಮೇಶ್ ಅವರ ನೇತೃತ್ವದಲ್ಲಿ ನಡೆದಿದ್ದವು. ೨೦೦೬ರ ಉಳಿದ ೪ ಪ್ರಮುಖ ಕಾರ್ಯಕ್ರಮಗಳಾದ ಕ್ರೀಡಾ ದಿನ, ಐಸಿಸಿಯಲ್ಲಿ ನಡೆದ ಕರ್ನಾಟಕ ದಿನ, ಗಣೇಶೋತ್ಸವ ಮತ್ತು ದೀಪೋತ್ಸವಗಳನ್ನು ನಾವೆಲ್ಲರೂ ಸೇರಿ ಬಹಳ ವಿಜೃಂಭಣೆಯಿಂದ ಆಚರಿಸಿದ್ದೇವೆ. ಇವಲ್ಲದೆ ಈ ವರ್ಷ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸಲು ಸಾಹಿತಿ ಡಾ॥ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರು ನಡೆಸಿಕೊಟ್ಟ ಕನ್ನಡ ಸಾಹಿತ್ಯ ಶಿಬಿರ, ಧರ್ಮಸ್ಥಳದ ಧರ್ಮಾಧಿಕಾರಿಗಳಾದ ವೀರೇಂದ್ರ ಹೆಗ್ಗಡೆಯವರೊಂದಿಗೆ ಸಂವಾದ, ಚಿಟ್ಟಾಣಿ ರಾಮಚಂದ್ರ ಹೆಗಡೆಯವರಿಂದ ಯಕ್ಷಗಾನ, ನಟ ರಮೇಶ್ ಭಟ್ಟರೊಂದಿಗೆ ಭೇಟಿ, ಅ. ರಾ. ಮಿತ್ರರ ಹಾಸ್ಯ ಸಂಜೆಯಂತಹ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೆವು. ನಮ್ಮ ಸಂಗೀತ ರಸಿಕರಿಗೆ ರಸದೌತಣವೀಯಲು ತವರೂರಿನಿಂದ ಬಂದ ಶ್ರೀ ವಿದ್ಯಾಭೂಷಣ, ಖ್ಯಾತ ಹಿನ್ನೆಲೆ ಗಾಯಕ ಪುತ್ತೂರು ನರಸಿಂಹ ನಾಯಕ್, ಡಾ॥ ನಾಗವಲ್ಲಿ ನಾಗರಾಜ್ ಮತ್ತು ಡಾ॥ ರೋಹಿಣಿ ಮೋಹನ್ ಅವರುಗಳ ಸಂಗೀತ ಕಛೇರಿಗಳು ಆಯೋಜಿಸಲ್ಪಟ್ಟಿದ್ದವು. ಈ ಎಲ್ಲ ಕಾರ್ಯಕ್ರಮಗಳನ್ನೂ ಸಮಿತಿಗಳ ಸದಸ್ಯರ ಸಂಪೂರ್ಣ ಸಹಕಾರ ಮತ್ತು ನಿಮ್ಮೆಲ್ಲರ ಉತ್ತೇಜನದಿಂದ ಬಹಳ ಯಶಸ್ವಿಯಾಗಿ ನಡೆಸಿದ್ದೇವೆ.

ಹಾಗೇ ನಮ್ಮ ಒಲುಮೆಯ ತಾಯ್ನಾಡಿನ ಸುವರ್ಣ ಮಹೋತ್ಸವಕ್ಕೆ ಒಪ್ಪುವಂತೆ ವಿಶೇಷವಾಗಿ ವಿನ್ಯಾಸಗೊಂಡ ವಾರ್ಷಿಕ ಸಂಚಿಕೆ 'ಸ್ವರ್ಣಸೇತು' ಈಗ ನಿಮ್ಮ ಕೈಸೇರಿದೆ. ಇದೀಗ, ನಿಮ್ಮಿಂದ ಬೀಳ್ಕೊಳ್ಳುವ ಮೊದಲು, ಈ ಒಂದು ವರ್ಷದಲ್ಲಿ ನಮ್ಮ ನೆಚ್ಚಿನ ಕನ್ನಡ ಕೂಟ ನಡೆದ ಹಾದಿಯನ್ನು ಪರಿಶೀಲಿಸುವುದು ಉಚಿತವೆಂದು ಭಾವಿಸುತ್ತೇನೆ.

– ವಿಶ್ವ ಕನ್ನಡ ಸಮ್ಮೇಳನವನ್ನು ನಮ್ಮ ಬೇ–ವಲಯದಲ್ಲಿ ನಡೆಸಬೇಕೆನ್ನುವುದು ನನ್ನ ಆಕಾಂಕ್ಷೆ. ಈ ನನ್ನ ಆಸೆಗೆ ಕನ್ನಡ ಕೂಟದ ಹಲವು ಸದಸ್ಯರ ಸಹಕಾರ ದೊರಕಿ ವಿಶ್ವಕನ್ನಡ ಸಮ್ಮೇಳನವನ್ನು ನಡೆಸಲು ಬೇಕಾದ ಆರ್ಥಿಕ, ಸಾಮಾಜಿಕ ಸಾಧ್ಯತೆಗಳನ್ನು ವಿಶ್ಲೇಷಿಸುವ ಮಂಡಳಿಯೊಂದು ಅಸ್ತಿತ್ವಕ್ಕೆ ಬಂದಿತು. ಮಂಡಳಿಯ ಸದಸ್ಯರು ನಡೆಸಿದ ಅಧ್ಯಯನದಿಂದ, ನಮ್ಮ ಕೂಟಕ್ಕೂ ದೊಡ್ಡ

ಮಟ್ಟದ ವಿಶ್ವ ಕನ್ನಡ ಸಮ್ಮೇಳನ ನಡೆಸುವುದು ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ಸಾಧ್ಯವೆಂಬುದು ನಿಶ್ಚಿತವಾಗಿದೆ. ಇದರಿಂದಾಗಿ ನಮ್ಮೆಲ್ಲರ ಕನಸು ನನಸಾಗುವ ದಿನ ದೂರವಿಲ್ಲ ಎನ್ನುವುದು ನನ್ನ ಅನಿಸಿಕೆ.

– ನಮ್ಮ ಮುಂದಿನ ಪೀಳಿಗೆಯಲ್ಲಿ ಕನ್ನಡ ಭಾಷೆ, ಸಂಸ್ಕೃತಿ, ಚರಿತ್ರೆ ಮತ್ತು ಹಿರಿಮೆಗಳ ಬಗ್ಗೆ ಒಲವು ಹಾಗು ಆಸಕ್ತಿ ಮೂಡಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಹಳ ಯಶಸ್ವಿಯಾಗಿ ಇದುವರೆಗೂ ನಡೆಸಿಕೊಂಡು ಬಂದಿದ್ದೇವೆ. ಈ ನಿಟ್ಟಿನಲ್ಲಿ ಚಿಣ್ಣರಿಗಾಗಿ ರಂಗೋಲಿ ಸ್ಪರ್ಧೆ, ಕನ್ನಡ ನಾಡಿನ ಚಾರಿತ್ರಿಕ ವ್ಯಕ್ತಿಗಳ ಕುರಿತು ಪ್ರಬಂಧ ಸ್ಪರ್ಧೆಗಳನ್ನು ಆಯೋಜಿಸಿದ್ದೆವು. ಈ ಪ್ರಯತ್ನಗಳನ್ನು ಮುಂದಿನ ಸಮಿತಿಗಳ ಸದಸ್ಯರು ಮುಂದುವರೆಸಿಕೊಂಡು ಹೋಗುವರೆಂದು ಆಶಿಸುತ್ತೇನೆ.

– ಹಿರಿಯರಾದ ಶ್ರೀ ರವಿ ರವೀಂದ್ರನಾಥ್ ಅವರ ಸತತ ಪ್ರಯತ್ನದಿಂದ ನಮ್ಮ ಕೂಟವು ಇದೀಗ 'ಲಾಭ–ಅನಪೇಕ್ಷಿತ ಸಂಸ್ಥೆ'ಯೆಂದು (Non-profit organisation, 501C(3) Status) ತಾತ್ಕಾಲಿಕವಾಗಿ ಅಂಗೀಕೃತವಾಗಿದೆ. ಇದನ್ನು ಮುಂದುವರೆಸಿಕೊಂಡು ಹೋಗಲು ನಮ್ಮ ಸಂಸ್ಥೆಯು 'ಕನ್ನಡ–ಕಲಿ' ತರಗತಿಗಳ ಜೊತೆಗೆ ಇನ್ನೂ ಇತರ ಧಾರ್ಮಿಕ ಹಾಗು ಸಾಮಾಜಿಕ ಮೌಲ್ಯಯುತ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಡೆಸಬೇಕಾಗಿದೆ. ಇಲ್ಲೂ ನಿಮ್ಮೆಲ್ಲರ ಸಹಕಾರ ನಮ್ಮ ಹೊಸ ಕಾರ್ಯಕರ್ತರಿಗೆ ಸಿಗುವುದೆಂದು ಆಶಿಸುತ್ತೇನೆ.

– ಎಲ್ಲ ಹಣಕಾಸಿನ ವ್ಯವಹಾರ ನಿರ್ದಿಷ್ಟವಾಗಿ, ನಿಯಮಿತವಾಗಿ, ಗೊಂದಲಗಳಿಲ್ಲದೆ ನಡೆದುಕೊಂಡು ಹೋಗಲು ಈ ವರ್ಷದಿಂದ ಕಿಣಭಿಇಜುಟಿ ಬಳಸಿಕೊಳ್ಳಲಾಗಿದೆ. ಜಾಹೀರಾತುಗಳ ಲೆಕ್ಕವಿಟ್ಟು ಅವುಗಳತ್ತ ನಿಗಾವಹಿಸುವ ಜವಾಬ್ದಾರಿಯುತ ಕಾರ್ಯ ಸರಳೀಕೃತಗೊಂಡು ಪಾರದರ್ಶಕವಾಗಿದೆ. ಹಿಂದೆ ಒಂದೆರಡು ವರ್ಷಗಳಲ್ಲಿ ಸರಕಾರಕ್ಕೆ ತೆರಿಗೆ ಪಾವತಿಸದೆ ಉಂಟಾಗಿದ್ದ ಸಮಸ್ಯೆಗಳನ್ನು ಸರಿಪಡಿಸಲಾಗಿದೆ. ಇನ್ನು ಮುಂದಿನ ಸಮಿತಿಗಳೂ ಇದನ್ನು ಅನುಸರಿಸಿ ನಮ್ಮ ಕೂಟವನ್ನು ಉತ್ತಮ ಮಾರ್ಗದಲ್ಲಿ ನಡೆಸಿಕೊಂಡು ಹೋಗುವರೆಂಬ ನಂಬಿಕೆ ಹೊಂದಿದ್ದೇನೆ. ಹೀಗೇ ಮುಂದುವರೆಸಿಕೊಂಡು ಹೋಗುವುದು ಕೂಟದ ಲಾಭ–ಅನಪೇಕ್ಷಿತ ಸಂಸ್ಥೆಯ ನೆಲೆಯನ್ನು ಉಳಿಸಿಕೊಳ್ಳಲು ಬಹುಮುಖ್ಯವಾಗಿದೆ.

– ಈ ವರ್ಷದ ಎಲ್ಲ ಕಾರ್ಯಕ್ರಮಗಳಿಗೂ ನಮ್ಮ ಕಾರ್ಯಕರ್ತರು, ಅದರಲ್ಲೂ ಮಾರುಕಟ್ಟೆ–ಜಾಹೀರಾತು ಸಮಿತಿಯ ಸದಸ್ಯರು, ಪೋಷಕ–ಪ್ರಯೋಜಕರನ್ನು ಹೊಂದಿಸಿದ್ದಾರೆ. ಎಲ್ಲಾ ಕರಪತ್ರಗಳಿಗೂ (ವಿ–ಅಂಚೆ ಹಾಗೂ ಪತ್ರದಂಚೆ) ಜಾಹೀರಾತುದಾರರು ದೊರೆತಿದ್ದು, ಕರಪತ್ರದ ಖರ್ಚು ಕೂಟಕ್ಕೆ ಹೊರೆಯಾಗದೆ ಹೋಗಿದೆ. ಕರಪತ್ರಗಳು ನಿಮ್ಮ ಅಂಚೆಪೆಟ್ಟಿಗೆಯಲ್ಲಿ ಬಂದು ಬೀಳುವ ಒಟ್ಟು ಪ್ರಕ್ರಿಯೆಯನ್ನು ಸರಳೀಕರಿಸಲಾಗಿದೆ. ಅಂಚೆ ಇಲಾಖೆಯೊಂದಿಗೆ ನಮ್ಮ ಸಗಟು–ಅಂಚೆಯ ಈ ಒಪ್ಪಂದ ನಮ್ಮ ಕೂಟಕ್ಕೆ ಆರ್ಥಿಕವಾಗಿಯೂ ಕಾರ್ಯಕರ್ತರಿಗೆ ಸಮಯಾವಕಾಶದಲ್ಲೂ ಅನುಕೂಲಕರವಾಗಿದೆ.

ತಮ್ಮ ಬಿಡುವಿಲ್ಲದ ಕೆಲಸ ಕಾರ್ಯಗಳ ಮಧ್ಯೆ ಕನ್ನಡ ಸೇವೆಗಾಗಿ ಶ್ರದ್ಧೆಯಿಂದ ದುಡಿದ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾದ ರಮೇಶ್ ಜಾವಗಲ್, ಆನಂದ್ ಗಿರೀಶ್, ಕಾವ್ಯ ಕುರುಬೂರ್, ಸೋಮಶೇಖರ್ ಹೆಬ್ಬಳಲು ಮತ್ತು ಸಂಧ್ಯಾ ರವೀಂದ್ರನಾಥ್ ಇವರುಗಳಿಗೆ ನನ್ನ ಧನ್ಯವಾದಗಳು. ಮೇಲೆ ಹೇಳಿದ ಮತ್ತು ಹೇಳಿರದ ಹಲವಾರು ಕೆಲಸ–ಕಾರ್ಯಗಳಲ್ಲಿ ಸಹಕಾರವಿತ್ತ ಪ್ರತಿಯೊಂದು ಸಮಿತಿ–ಸದಸ್ಯರಿಗೂ, ನಮಗೆಲ್ಲ ಹೆಗಲಿಗೆ ಹೆಗಲಿತ್ತು ಜತೆಗೂಡಿದ ಸ್ವಯಂಸೇವಕರಿಗೂ, ಕನ್ನಡ–ಕಲಿ ತರಗತಿಗಳ ಅಧ್ಯಾಪಕ ವರ್ಗಕ್ಕೂ, ಜೊತೆಗೆ ಬಹು ಮುಖ್ಯವಾಗಿ ಇವರೆಲ್ಲರ ಸಂಗಾತಿಗಳಿಗೂ, ಬಂಧುಗಳಿಗೂ ನನ್ನ ಅನಂತಾನಂತ ವಂದನೆಗಳು. ನನ್ನ ಎಲ್ಲ ಆಕಾಂಕ್ಷೆಗಳಿಗೆ ಪೂರಕವಾಗಿ ಪ್ರೋತ್ಸಾಹಿಸುವ ನನ್ನ ಪ್ರಿಯಪತ್ನಿ ಪ್ರತಿಭಾ ಪ್ರಿಯದರ್ಶಿನಿ ಹಾಗೂ ನಮ್ಮಿಬ್ಬರ ಕಣ್ಮಣಿ ಸಮರ್ಥ ಕುಞ್ಞೋಡಿಯನ್ನು ಈ ಸಂದರ್ಭದಲ್ಲಿ ನೆನೆಯಲಿಚ್ಛಿಸುತ್ತೇನೆ.

ಉತ್ತರ ಕ್ಯಾಲಿಫೋರ್ನಿಯಾದ ಕನ್ನಡ ಕೂಟದ ಬೋರ್ಡ್ ಆಫ್ ಟ್ರಸ್ಟೀಸ್ ಸದಸ್ಯನಾಗಿ ಇನ್ನು ಮುಂದೆಯೂ ಕನ್ನಡದ ಸೇವೆಯನ್ನು ಮಾಡುವ ಹಾಗೂ ಕನ್ನಡಿಗರೊಂದಿಗಿನ ಒಡನಾಟವನ್ನು ಮುಂದುವರೆಸುವ ಅವಕಾಶ ದೊರೆತಿರುವುದು ನನ್ನ ಸುದೈವ. ಕರ್ನಾಟಕದ ಸುವರ್ಣ ಮಹೋತ್ಸವದ ಈ ವರ್ಷದಲ್ಲಿ ನಿಮ್ಮೆಲ್ಲರ ಬಾಳು ಸುಖ–ಸಂತಸಗಳಿಂದ ಸುವರ್ಣಮಯವಾಗಲೆಂದು ಹಾರೈಸುತ್ತೇನೆ.

ಇಂತಿ ಸ್ನೇಹದಲ್ಲಿ,
ನರೇನ್ ಕುಞ್ಞೋಡಿ



# ಅಧ್ಯಕ್ಷರ ಸಂದೇಶ

ಆತ್ಮೀಯ ಕನ್ನಡ ಕೂಟದ ಸದಸ್ಯರಿಗೆ ಸಸ್ನೇಹ ವಂದನೆಗಳು.

ನಮ್ಮ ಕನ್ನಡ ಕೂಟದ ಕುಟುಂಬದವರಿಗೆಲ್ಲಾ ಸುವರ್ಣ ಕರ್ನಾಟಕ ವರ್ಷದ ಶುಭಾಶಯಗಳು. ೨೦೦೬ ಕನ್ನಡಿಗರಿಗೆಲ್ಲಾ ಬಹಳ ವಿಶೇಷವಾದ ವರ್ಷ. ಕನ್ನಡದ ಕಣ್ಮಣಿ ಅಣ್ಣಾವ್ರು ಇಲ್ಲವಾದರೆ, ಕನ್ನಡಕ್ಕೆ ಮತ್ತೊಬ್ಬ ರಾಷ್ಟ್ರಕವಿ ಸಿಕ್ಕಿದ್ದಾರೆ. ಉತ್ತರ ಕ್ಯಾಲಿಫೋರ್ನಿಯಾದ ಕನ್ನಡ ಕೂಟದ ಅಧ್ಯಕ್ಷನಾಗಿ ನನ್ನನ್ನು ಒಮ್ಮತದಿಂದ ಚುನಾಯಿಸಿ, ಕನ್ನಡದ ಸೇವೆಯನ್ನು ಮಾಡುವ ಜವಾಬ್ದಾರಿಯನ್ನು ವಹಿಸಿಕೊಟ್ಟಿದ್ದಕ್ಕೆ ಮತ್ತು ಈ ಸುಂದರವಾದ ಈ ಸಂಸ್ಥೆಯನ್ನು ನಡೆಸಲು ಅವಕಾಶ ಮಾಡಿಕೊಟ್ಟ, ನಿಮಗೆಲ್ಲರಿಗೂ ಬಹಳ ವಂದನೆಗಳು.

ನಾವೆಲ್ಲಾ ಮನೆಯಲ್ಲಿ ಕನ್ನಡ ಮಾತನಾಡಿದರೂ ನಮ್ಮ ಮಕ್ಕಳಿಗೆ ಸರಿಯಾಗಿ ಕನ್ನಡ ಕಲಿಸಲಾಗದೆ ಪರದಾಡುತ್ತಿದ್ದೆವು. ಇದನ್ನೇ ಮನಸ್ಸಿನಲ್ಲಿಟ್ಟುಕೊಂಡು ನಾನು ಯೋಜಿಸಿದ ಕಾರ್ಯಕ್ರಮ 'ಕನ್ನಡ ಕಲಿ'. ಇದಕ್ಕೆ ಸಮಿತಿಯ ಸಹಕಾರದೊಂದಿಗೆ ಬಹಳಷ್ಟು ಸ್ವಯಂಸೇವಕರ ಮತ್ತು ತಂದೆ–ತಾಯಿಯರ ಸಹಕಾರ ದೊರಕಿ ಇಂದು 'ಕನ್ನಡ ಕಲಿ' ಎಲ್ಲರಿಗೂ ಪ್ರಿಯವಾದ ಕನ್ನಡ ಕಾರ್ಯಕ್ರಮವಾಗಿದೆ. ಈಗ ೭೦ಕ್ಕೂ ಹೆಚ್ಚು ಮಕ್ಕಳು ಕನ್ನಡ ಕಲಿಯುತ್ತಿರುವುದು ನನಗೆ ತುಂಬಾ ತೃಪ್ತಿಯನ್ನು ತಂದಿದೆ. ಇವರೆಲ್ಲಾ ಕನ್ನಡದಲ್ಲಿ ಆಸಕ್ತಿ ಬೆಳೆಸಿಕೊಂಡು ಕನ್ನಡದ ಕೀರ್ತಿ ಪತಾಕೆಯನ್ನು ವಿಶ್ವದೆಲ್ಲೆಡೆ ಹಾರಿಸಲಿ. ಕೂಟದ ಕಾರ್ಯಕ್ರಮಗಳಲ್ಲಿ ಯುವಕ–ಯುವತಿಯರ ಭಾಗವಹಿಸುವಿಕೆ, ನಿರೂಪಣೆ–ನಿರ್ವಹಣೆಯಲ್ಲಿ ಮಿತ ಪಾಲ್ಗೊಳ್ಳುವಿಕೆಯನ್ನು ನೋಡಿ, ನಾನು 'ಯುವ ಸಮಿತಿ'ಯನ್ನು ಆರಂಭಿಸಿದೆ. ಇದು ಅವರಲ್ಲಿ ಅಡಗಿರುವ ಪ್ರತಿಭೆಯನ್ನು ಹೊರತರಲು, ಆತ್ಮವಿಶ್ವಾಸವನ್ನು ಮೂಡಿಸಲು ಸಮರ್ಥ ವೇದಿಕೆಯಾಯಿತು. ಕೂಟದ ಮುಂದಿನ ಸಮಿತಿಗಳು ಈ 'ಯುವ ಸಮಿತಿ'ಗೆ ಮತ್ತು ಯುವ ಜನಾಂಗಕ್ಕೆ ಪ್ರೋತ್ಸಾಹ ನೀಡುವುದು ಎಂದು ನಂಬಿದ್ದೇನೆ.

ಕನ್ನಡ ಕಲಿ ಕಾರ್ಯಕ್ರಮದ ನಂತರ, ತಾಯ್ನಾಡಿಗೆ ತೆರಳಿ, ಕನ್ನಡದ ನೆಲದಲ್ಲಿ ಕನ್ನಡದ ಕಂಪನ್ನು ಸವಿಯುವ ಅವಕಾಶ ನನ್ನ ಉದ್ಯೋಗಸಂಸ್ಥೆಯ ಮೂಲಕ ದೊರಕಿತು. ಇಲ್ಲಿಯ ಕನ್ನಡ ಕೂಟದ ಕೆಲಸ ಬಿಡಲು ಮನಸಿಲ್ಲದೆ ತಳಮಳಿಸಿದೆ. ಆದರೆ ಕನ್ನಡಮ್ಮನ ಕರೆ, ನನ್ನ ಈ ಅಧ್ಯಕ್ಷ ಪದವಿಯ ಅವಧಿಯಲ್ಲಿಯೇ ದೊರಕಿರುವಾಗ, ಇದಕ್ಕೆ ತಲೆಬಾಗಲೇ ಬೇಕಾಯಿತು. ಈ ಸಮಿತಿಯಲ್ಲಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ನರೇನ್ ಕುಞ್ಞೋಡಿ, ಅಧ್ಯಕ್ಷರಾಗಿ, ಸಮಿತಿಯ ಚುಕ್ಕಾಣಿಯನ್ನು ಹಿಡಿಯಲು ಒಪ್ಪಿ ನನ್ನ ಈ ನಿರ್ಧಾರಕ್ಕೆ ಸಹಕಾರ ನೀಡಿದರು. ಶ್ರೀ ನರೇನ್‌ಗೆ ನನ್ನ ಧನ್ಯವಾದಗಳು.

ಪ್ರತಿಭಾನ್ವಿತ ಕಾರ್ಯಕಾರಿ ಸಮಿತಿಯವರೆಲ್ಲಾ ಬಹಳ ಉತ್ಸಾಹದಿಂದ, ಯೋಜನಾಶೀಲರಾಗಿ ಕೆಲಸಮಾಡಿರುವುದು ಈ ಕೂಟದ ಯಶಸ್ಸಿಗೆ ಕಾರಣ. ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾದ ನರೇನ್ ಕುಞ್ಞೋಡಿ, ಕಾವ್ಯ ಕುರುಬೂರ್, ಸೋಮಶೇಖರ್ ಹೆಬ್ಬಳಲು, ಆನಂದ್ ಗಿರೀಶ್ ಮತ್ತು ಸಂಧ್ಯಾ ರವೀಂದ್ರನಾಥ್ ಇವರುಗಳು ತೋರಿದ ಪ್ರೋತ್ಸಾಹ, ಸೃಜನಶೀಲತೆ ಸದಾ ಅನುಕರಣೀಯ. ಇವರುಗಳಿಗೆ ಮತ್ತು ಕಾರ್ಯಕಾರಿ ಸಮಿತಿಯ ಸರ್ವರಿಗೆ ನನ್ನ ಅನಂತಾನಂತ ಧನ್ಯವಾದಗಳು. ತಮ್ಮೆಲ್ಲ ಕೆಲಸ ಕಾರ್ಯಗಳನ್ನು ಬಿಟ್ಟು, ಕನ್ನಡ ಕೂಟದ ಸೇವೆಗೆ ತಮ್ಮ ತನು–ಮನಗಳನ್ನು ಅರ್ಪಿಸಿಕೊಂಡ, ಸಮಿತಿಯ ಎಲ್ಲಾ ಸದಸ್ಯರಿಗೂ ನನ್ನ ಹೃತ್ಪೂರ್ವಕ ವಂದನೆಗಳು. ಇದರ ಜೊತೆ ನನ್ನ ಎಲ್ಲಾ ಕೆಲಸ ಕಾರ್ಯಗಳಲ್ಲೂ ಸಹಭಾಗಿಯಾಗಿ ನಿಂತ ನನ್ನ ಸಹಧರ್ಮಿಣಿ ರತ್ನಾ ಹಾಗೂ ಅತ್ಮೀಯ ಮಿತ್ರ ಪದ್ಮನಾಭ ರಾವ್ ಮೇಲನಹಳ್ಳಿಯವರಿಗೆ ನನ್ನ ಅನಂತ ಧನ್ಯವಾದಗಳು. ನಾವು ಬೆಳಸಿದ ಈ ಕನ್ನಡ ಕೂಟ ಇನ್ನೂ ಹೆಚ್ಚು–ಹೆಚ್ಚು ಕನ್ನಡದ ಕೆಲಸಮಾಡಲಿ ಎಂದು ಆಶಿಸುತ್ತಾ, ನಮ್ಮ ಈ ಕೆಲಸ–ಕಾರ್ಯದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲರಿಗೂ ನಾನು ಆಭಾರಿ.

– ರಮೇಶ್ ಜಾವಗಲ್
  ಸಿರಿಗನ್ನಡಂ ಗೆಲ್ಗೆ

# Mobile Auto Service

*Your one-stop solution for all auto repairs*

***5% discount on labor for first service New customers only***

**Services on all types of automobiles**

*Oil-changes*
*Air conditioning*
*Brakes and Alignment*
*Tune-ups, Timing Belt, Check Engine light diagnosis*
*Factory preventive maintenance services (15K/30K/60K/90K)*
*Electrical diagnosis*
*Battery, Starter, Alternator*
*Radiator, Belts, Water pump*
*Coolant service and overheating problems*
*Pre-purchase vehicle evaluation*

## Beat all competitors' advertised prices on labor by 5%

All services performed by **ASE certified technician** with over **15 years of automobile service experience**

Technician Contact details**:**

ASE CERTIFIED

Mysore SriRanga
msriranga@excite.com
(510) 996 8404

**I do house calls for the convenience of the customers**

**All services guaranteed**